ಮುಗಿಸಿದಾಗ ಮುಂದೆ ಓದಬೇಕು ಎನ್ನುವ ಆಸೆ ಕುತ್ತಿಗೆಯವರೆಗೆ ಇತ್ತು. ಜೊತೆಗಾರ್ತಿಯರೆಲ್ಲಾ ಕಾಲೇಜಿಗೆ ಸೇರಿಕೊಳ್ಳುವ ಸಡಗರದಲ್ಲಿದ್ದರು. ಅಣ್ಣನ ಕೈಕಾಲು ಹಿಡಿದಿದ್ದರೆ ಅವನನ್ನು ಒಪ್ಪಿಸುವುದು ಕಷ್ಟವೇನಲ್ಲ ಎಂದು ಛಾಯಾ ಅಂದುಕೊಂಡಿದ್ದಳು. ಆದರೆ, ಪಟ್ಟು ಸಡಿಲಿಸಬೇಕಲ್ಲ ಅತ್ತಿಗೆ?

"ಗಂಡು ಹುಡುಕಿ ಮದುವೆ ಮಾಡಿ ಕೈ ತೊಳ್ಕಂಡ್ರೆ ಸಾಕಾಗಿದೆ. ನಮಗೂ ಇಬ್ಬಿಬ್ರು ಹುಡುಗೀರೇ ಹುಟ್ಟಿದಾರೆ. ಎಲ್ರಿಗೂ ದಿಕ್ಕು ತೋರಿಸೋ ಹೊತ್ತಿಗೆ ತಲೆಗೂದಲು ಹಣ್ಣಾಗಿ ಹೋಗುತ್ತೆ..." ಅಣ್ಣನ ಕಿವಿ ಕಚ್ಚಿದ್ದಳು ಅತ್ತಿಗೆ. ಹೇಳಿದಂತೆ ತಕ್ಷಣ ಗಂಡು ಹುಡುಕುವ ಉಮೇದು ತೋರಿಸಿರಲಿಲ್ಲ ಅಣ್ಣ. ಹಾಗೆ ತೋರಿಸುವ ಹಾಗೂ ಇರಲಿಲ್ಲ. ಇಂತಿಷ್ಟು ವಯಸ್ಸಾಗಿರಬೇಕು ಎನ್ನುವ ಕಾನೂನೇ ಉಂಟಲ್ಲ? ಅಲ್ಲಿಯವರೆಗಾದರೂ ಕಳಿಸಬಹುದಿತ್ತು ಕಾಲೇಜಿಗೆ. ಕೊನೇಪಕ್ಷ ಪಿ.ಯು. ಮುಗಿಯುವವರೆಗಾದರೂ ಓದಿಸಬಹುದಿತ್ತು. ಅದೂ ಮಾಡಲಿಲ್ಲ. ಮನೆಯ ಚಾಕರಿಗೆ ಹಾಕಿಕೊಂಡಳು ಅತ್ತಿಗೆ. ತಾನು ಮಾತ್ರಾ ಎಲ್ಲಿ ಊಟದಮನೆ ಹೇಳಿಕೆ ಬಂದರೆ ಅಲ್ಲಿಗೆ, ಸಿನಿಮಾ, ನಾಟಕ, ತೌರೂರು ಎಂದು ಹಬ್ಬ ಮಾಡಿಬಿಟ್ಟಳು.

***

"ಏನೇ, ದೋಸೆಸಟ್ಟುಗ ತಂದು ಎಬ್ಬಿಸ್ಬೇಕಾ ನಿನ್ನ? ಇನ್ನೂ ಏನ್ಮಾಡ್ತಿದ್ದಿ?" ಮತ್ತೊಮ್ಮೆ ಎಚ್ಚರಿಕೆಯ ಗಂಟೆ ಮೊಳಗಿತು. ಛಾಯಾ ಕೈಲಿದ್ದ ಬ್ಯಾಗಿಗೆ ಎರಡು ನೋಟುಪುಸ್ತಕ, ಪೆನ್ನು ಹಾಕಿಕೊಂಡು ಹೊರಗೆ ಧಾವಿಸಿದಳು.

"ಬಸ್ ಛಾರ್ಜಿಗೆ ದುಡ್ಡು ಇಟ್ಕೊಂಡಿದೀಯಾ?"

"ಹೂಂ..."

"ಕಾಲೇಜು ಮುಗೀತಿದ್ದಾಗೆ ಮನೆಗೆ ಬಂದ್ಬಿಡು. ಒಂದಲ್ಲಾ ಒಂದು ಬಸ್ಸು ಇದ್ದೇ ಇರುತ್ತೆ..."

"ಹೂಂ."

"ಇದರ ಮಕ ನೋಡಿದ್ರೆ ಹೊಟ್ಟೆಗೆ ಬೆಂಕಿ ಬಿದ್ದ ಹಾಗಾಗುತ್ತೆ. ಅಮ್ಮನ ಹಾಲಿದ್ರೂ ಕುಡಿಯೋ ಯೋಗ ಇಲ್ಲ. ಮೇಲುಹಾಲೇ ಗತಿ..."

ಚಪ್ಪಲಿಯಲ್ಲಿ ತೂರಿಕೊಳ್ಳುತ್ತಿದ್ದ ಕಾಲುಗಳು ಅಲ್ಲೇ ಸ್ಥಗಿತಗೊಂಡವು.

"ಈಗ್ಲೂ ಹೋಗ್ಬೇಡ ಅನ್ನಿ ಅತ್ತೆ, ಮನೇಲೇ ಇರ್ತೀನಿ. ನನ್ನ ಬಡ್ಡು ತಲೆಗೆ ವಿದ್ಯೆ ಹತ್ತೋದು ಅಷ್ಟ್ರಲ್ಲೇ ಇದೆ..."

"ಮುದುಕಿ ಥರ ಮಾತಾಡ್ಬೇಡ. ಎಷ್ಟೊರ್ಷ ನಿಂಗೆ, ಇನ್ನೂ ಇಪ್ಪತ್ತೊಂರು. ಇಲ್ಲೇನು ನಿಮ್ಮಪ್ಪ ದುಡ್ಡಿನ ಗಿಡ ಹಾಕಿಟ್ಟಿದಾರಾ, ಕಾಲು ಚಾಚಿ ಕೂತ್ಗಂಡು ತಿಂತೀನಿ ಅನ್ನೋಕೆ..."

ಮಾತಾಡದೆ ಮುಂದೆ ಹೆಜ್ಜೆ ಇಟ್ಟಳು ಛಾಯಾ. ಅಪ್ಪ ದುಡ್ಡಿನ ಗಿಡ ನೆಡುವುದು ಬೇಡ, ಈ ಸಂದರ್ಭದಲ್ಲಿ ಬದುಕಿದ್ದರೂ ತನಗೆ ಈ ಪಾಡು ಬರುತ್ತಿರಲಿಲ್ಲ, ಬಹುಶಃ. ಅನ್ನವೋ, ಗಂಜಿಯೋ ತೌರಿನಲ್ಲಿ ಸ್ವಾಗತ ಇರುತ್ತಿತ್ತು. ಸಾಂತ್ವನ ಸಿಗುತ್ತಿತ್ತು. ದುರ್ದೈವ ಅಂದರೆ ಮತ್ತೇನು? ಹೆತ್ತವರನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿ ಬೆಳೆದವಳಿಗೆ ತೌರು ಅನ್ನುವುದು ದೂರದ ಬೆಟ್ಟ. ಬಾಯಿಮಾತಿಗಾದರೂ 'ಬಾ... ಅಂದಿರಲಿಲ್ಲ ಅಣ್ಣ. ಎಲ್ಲಿ ಅಂಟುಪುರಲೆಯಂತೆ ಮತ್ತೆ ಅಂಟಿಕೊಂಡುಬಿಡುತ್ತಾಳೋ ಎನ್ನುವ ಭೀತಿ ಸಹಜ ಇರಬಹುದು. ಅವನಿಗಲ್ಲದಿದ್ದರೂ ಅತ್ತಿಗೆಗೆ ಆತಂಕ ಇದ್ದೇ ಇರುತ್ತದೆ. 'ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ ಅನ್ನುವಂತೆ ಮದುವೆ ಮಾಡಿ ಕಳಿಸಿ ಎರಡು ವರ್ಷ ಆಗುವುದರೊಳಗೆ ಮತ್ತೆ ತೌರು ಸೇರಿಕೊಂಡರೆ? ಅದೂ ಒಂದಿದ್ದ ಜೀವ ಎರಡು ಆಗಿ? ಎಲ್ಲಾ ಸರಿಯಾಗಿದ್ದಿದ್ದರೆ ಚೊಚ್ಚಲ ಬಾಣಂತನ ತೌರಿನಲ್ಲಿ ಆಗಬೇಕಾದ್ದು ಲೋಕಾರೂಢಿ. ಯಾವುದು ಸರಿಯಾಗಿದೆ ತನ್ನ ಬದುಕಿನಲ್ಲಿ? 'ಹೋಗೇ... ನಡಿ...' ಎಂದು ಅತ್ತೆ ಅಟ್ಟಿಬಿಡುತ್ತಾರೆಂದು ಛಾಯಾ ನಿರೀಕ್ಷಿಸಿದ್ದಳು. ಮಾನಸಿಕವಾಗಿ ಅದಕ್ಕೆ ಸಿದ್ಧಳಾಗಿದ್ದಳು ಎಂದು ಹೇಳಬರುವುದಿಲ್ಲ. ಅವಳ ಮನಸ್ಸು ಯೋಚನಾಶಕ್ತಿಯನ್ನೇ ಕಳೆದುಕೊಂಡು ಮರಗಟ್ಟಿ ಹೋಗಿತ್ತು. ನಡೆದಿದ್ದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೆ ಅದೇನೋ ಕೆಟ್ಟ ಕನಸೆಂದು ತನ್ನನ್ನು ನಂಬಿಸಿಕೊಳ್ಳಲೆತ್ನಿಸುತ್ತಿತ್ತು. ಅಣ್ಣ ಕರೆಯಲಿಲ್ಲ. ಅತ್ತೆ ಹೋಗು ಎಂದು ದೂಡಲಿಲ್ಲ. ಹೇಗೋ ಕಳೆದುಹೋಯ್ತು ಕಾಲ. ನಡೆದು ಹೋದ ದುರ್ಘಟನೆಯ ಕುರಿತು ಮನಸ್ಸು ಒಂದು ನಿರ್ಲಿಪ್ತಿಯನ್ನು ಬೆಳೆಸಿಕೊಂಡಿತು. ಎಷ್ಟು ದಿನ ಕಣ್ಣೀರು ಹಾಕುತ್ತಾ ಕಾಲ ಕಳೆಯಬಹುದು? ಎಷ್ಟು ದಿನ ಊಟ, ತಿಂಡಿ ಬಿಟ್ಟು ಕೊರಗಬಹುದು?